**ಕರ್ನಾಟಕ ಸರ್ಕಾರ**

ಸಂಖ್ಯೆ: ಎಫ್‌ಡಿ 27 ಸಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:27.10.2020

**ಅಧಿಸೂಚನೆ**

ವಿಷಯ: **ಕರ್ನಾಟಕ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ನಿಯಮಗಳು, 2020**.

********

**ಪ್ರಸ್ತಾವನೆ:**

ಭಾರತದ ರಾಷ್ಟ್ರಪತಿಗಳು ಪ್ರಖ್ಯಾಪಿಸಿದ ಅನಿಯಂತ್ರಿತ ಠೇವಣಿ ಯೋಜನೆಗಳ ಸುಗ್ರೀವಾಜ್ಞೆ ಫೆಬ್ರವರಿ 21, 2019 ರಿಂದ ಜಾರಿಗೆ ಬಂದಿತ್ತು ಮತ್ತು ನಂತರ ಈ ಸುಗ್ರೀವಾಜ್ಞೆಯನ್ನು 31 ಜುಲೈ 2019 ರಂದು ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧಿನಿಯಮ 2019 (Banning of Unregulated Deposit Schemes Act, 2019) ಯಾಗಿ ಬದಲಾಯಿಸಲಾಯಿತು ಮತ್ತು ಭಾರತ ಸರಕಾರದ ಗೆಜೆಟ್‌ನಲ್ಲಿ (Gazette of India, Extraordinary, Part II-Section 1 dated 31.07.2019) ಪ್ರಕಟಿಸಲಾಗಿತ್ತು ಮತ್ತು ಕೇಂದ್ರ ಸರ್ಕಾರವು ದಿನಾಂಕ: 12.02.2020ರ ಭಾರತ ಸರಕಾರದ ಗೆಜೆಟ್‌ನಲ್ಲಿ (Gazette of India, Extraordinary, Part II-Section 3 Subsection (ii)) Banning of Unregulated Deposit Schemes Rules 2020 ಯನ್ನು ಜಾರಿಗೆ ತಂದಿತ್ತು.

ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧಿನಿಯಮ, 2019ರ (2019ರ ಕೇಂದ್ರ ಅಧಿನಿಯಮ 21) 38ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**ನಿಯಮಗಳು**

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಇವು ರಾಜ್ಯ ಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2.ಪರಿಭಾಷೆಗಳು.-** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) “ಅಧಿನಿಯಮ “ಎಂದರೆ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧಿನಿಯಮ, 2019 (2019ರ ಕೇಂದ್ರ ಅಧಿನಿಯಮ 21);

(ಬಿ) “ನಮೂನೆ” ಎಂದರೆ ಈ ನಿಯಮಗಳೊಂದಿಗೆ ಲಗತ್ತಿಸಲಾದ ನಮೂನೆ;

(ಸಿ) “ಸರ್ಕಾರ” ಎಂದರೆ ಕರ್ನಾಟಕ ಸರ್ಕಾರ;

(ಡಿ) “ಸ್ವಪ್ರೇರಣೆಯ ಸಂಜ್ಞೇಯತೆ” ಎಂದರೆ ಸರ್ಕಾರದ ಏಜೆನ್ಸಿ, ನ್ಯಾಯಾಲಯ ಅಥವಾ ಇತರ ರಾಜ್ಯ ಅಥವಾ ಕೇಂದ್ರ ಪ್ರಾಧಿಕಾರವು ಅದರ ಸ್ವಂತ ನಿರೀಕ್ಷೆ ಅಥವಾ ಉಪಕ್ರಮದ ಅಧಿಕೃತ ಕಾರ್ಯಗಳ ಮೇಲೆ ತೆಗೆದುಕೊಂಡ ಕ್ರಮ.

(2) ಇದರಲ್ಲಿ ಬಳಸಲಾದ ಹಾಗೂ ಪರಿಭಾಷಿಸದಿರುವ ಆದರೆ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. 7ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿನ ಸಕ್ಷಮ ಪ್ರಾಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಯಾವುದೇ ಪ್ರಕರಣದ ವಾಸ್ತವಾಂಶಗಳು ಠೇವಣಿ ಪಡೆದುಕೊಂಡವನ ಹೆಸರಿನಲ್ಲಿ ಅಥವಾ ಠೇವಣಿ ಪಡೆದುಕೊಂಡವನ ಪರವಾಗಿ ಯಾರೇ ಇತರ ವ್ಯಕ್ತಿಯ ಹೆಸರಿನಲ್ಲಿ ಆರ್ಜಿಸಿದ ಸ್ವತ್ತುಗಳು ಅಥವಾ ಆಸ್ತಿಗಳ ಗುರುತಿಸುವಿಕೆಯು ಅಗತ್ಯವಾಗಿರುವುದೆಂದು ಸಕ್ಷಮ ಪ್ರಾಧಿಕಾರಕ್ಕೆ ಅಥವಾ ಅವರಿಗೆ ನೆರವು ನೀಡಲು ನೇಮಿಸಲಾದ ಅಧಿಕಾರಿಗೆ ಮನದಟ್ಟಾದರೆ, ಅವರು 31ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಬಳಸಿಕೊಂಡು ಪೋಲೀಸ್ ಪ್ರಾಧಿಕಾರಗಳಿಂದ ವಿವರಗಳನ್ನು ಸಂಗ್ರಹಿಸಬಹುದು ಅಥವಾ ಸೂಕ್ತವೆಂದು ಭಾವಿಸುವ ಯಾವುದೇ ಇತರ ಪ್ರಾಧಿಕಾರ ಅಥವಾ ಸಾರ್ವಜನಿಕರಿಂದ  ಸಾರ್ವಜನಿಕ ಅಧಿಸೂಚನೆಯ ಮೂಲಕ ಸ್ವತ್ತುಗಳು ಅಥವಾ ಆಸ್ತಿಗಳ ವಿವರಗಳನ್ನು ಪಡೆಯಬಹುದು.

(2) (1)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಅಧಿಸೂಚನೆಯ ಮುಖಾಂತರ ಸಾರ್ವಜನಿಕರಿಂದ ಮಾಹಿತಿಯನ್ನು ಕೋರಿದಲ್ಲಿ, ಮೇಲ್ನೋಟಕ್ಕೆ ವ್ಯಾಜ್ಯ ಇರುವುದೆಂದು ಪೋಲೀಸ್ ಪ್ರಾಧಿಕಾರಗಳಿಂದ ಮಾಹಿತಿಯ ವರದಿಯನ್ನು ಸ್ವೀಕರಿಸಿದ ಹದಿನೈದು ದಿನಗಳ ಅವಧಿಯೊಳಗಾಗಿ ಎರಡು ಪ್ರಮುಖ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಒಂದು ಜಾಹಿರಾತನ್ನು ನೀಡಬಹುದು.

(3) ಸಕ್ಷಮ ಪ್ರಾಧಿಕಾರವು, ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಿದ ತರುವಾಯ, ಠೇವಣಿ ಪಡೆದವನ ಕೆಲವು ಹೆಚ್ಚುವರಿ ಸ್ವತ್ತುಗಳನ್ನು ಜಪ್ತಿ ಮಾಡುವುದು ಅಗತ್ಯವಾಗಿರುವುದೆಂದು ಅಭಿಪ್ರಾಯಪಟ್ಟಲ್ಲಿ, ಅದು ಅಧಿನಿಯಮದ 7ನೇ ಪ್ರಕರಣದ ಅನುಸಾರವಾಗಿ ಹಾಗೆ ಮಾಡಬಹುದು.

**4.ತನಿಖೆ ಅಥವಾ ವಿಚಾರಣೆಯನ್ನು ನಡೆಸುವಾಗ ನಿಹಿತವಾದ ಅಧಿಕಾರಗಳು.-** (1) 7ನೇ ಪ್ರಕರಣದ (4)ನೇ ಉಪ ಪ್ರಕರಣದ ಅಡಿಯಲ್ಲಿ ತನಿಖೆ ಅಥವಾ ವಿಚಾರಣೆಯನ್ನು ನಡೆಸುವುದು ಅವಶ್ಯಕವೆಂದು ಅನ್ಯಥಾ ಭಾವಿಸಿದ ಹೊರತು, ತನಿಖೆ ಅಥವಾ ವಿಚಾರಣೆಯನ್ನು ನಡೆಸುವಾಗ ಸಕ್ಷಮ ಪ್ರಾಧಿಕಾರವು ಈ ಮುಂದಿನ ನೋಟೀಸುಗಳನ್ನು ನೀಡಬಹುದು, ಎಂದರೆ:-

(i) ನಮೂನೆ ಎ-ಯಲ್ಲಿ ಕ್ರಮ ಕೈಗೊಳ್ಳುವುದಕ್ಕಾಗಿ ನೋಟೀಸು;

(ii) ಹೆಚ್ಚುವರಿ ಮಾಹಿತಿ ಯಾವುದಾದರೂ ಅಗತ್ಯಪಡಿಸಿದಲ್ಲಿ ನಮೂನೆ ಬಿ ರಲ್ಲಿ ನೋಟೀಸು;

(iii) ನಮೂನೆ-ಸಿಯಲ್ಲಿ ಠೇವಣಿ ಪಡೆದವನ ಅಥವಾ ಇತರ ವ್ಯಕ್ತಿಗಳ ಮತ್ತು ಸಾಕ್ಷಿಗಳ ಖುದ್ದು ಹಾಜರಾತಿಗಾಗಿ ಅಂತಿಮ ನೋಟೀಸು.

(2) ತಾತ್ಕಾಲಿಕ ಜಪ್ತಿಯ ಆದೇಶವು ಸಾಧ್ಯವಾದಷ್ಟು ಮಟ್ಟಿಗೆ ಈ ಮುಂದಿನ ವಿವರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ದೂರಿನ ವಿವರಗಳು;

(ii) ಠೇವಣಿ ಪಡೆದವನ ಅಥವಾ ಹಣಕಾಸು ಸಂಸ್ಥೆಯ ವಿವರಗಳು;

(iii) ಪೋಲೀಸರಿಂದ ವಿಚಾರಣೆಯ ವರದಿ;

(iv) ನಿಯಂತ್ರಕರಿಂದ ಸ್ವೀಕರಿಸಲಾದ ವರದಿ, ಯಾವುದಾದರು ಇದ್ದಲ್ಲಿ;

(v) ಸಾರ್ವಜನಿಕರಿಂದ ಸ್ವೀಕರಿಸಿದ ದೂರುಗಳು;

(vi) ವ್ಯವಹರಣೆಗಳ ವಿವರಗಳು, ಅಂತಹ ಸ್ವತ್ತುಗಳ ಜಪ್ತಿಗಾಗಿ ಕಾರಣಗಳು, ಜಪ್ತಿಯ ಪರಿಣಾಮಕಾರಿ ದಿನಾಂಕ;

(vii) ನೀಡಲಾದ ಅಥವಾ ಜಾರಿಮಾಡಿದ ನೋಟೀಸುಗಳ ಪ್ರತಿಗಳು ಮತ್ತು ತಲುಪಿರುವುದಕ್ಕೆ ರುಜುವಾತು ಯಾವುದಾದರೂ ಇದ್ದಲ್ಲಿ, ಅದರ ಪ್ರತಿ;

(viii) ನಿರ್ಣಯಗಳ ಸಾರಾಂಶ;

(ix) ಜಪ್ತಿ ಮಾಡಿದ ಸ್ವತ್ತಿನ ವಿವರಗಳು, ಬ್ಯಾಂಕ್ ಖಾತೆ ಸಂಖ್ಯೆಗಳು, ಜಪ್ತಿ ಮಾಡಿದ ಮೊತ್ತ, ಷೇರುಗಳು ಹಾಗೂ ಬಾಂಡ್‌ಗಳನ್ನು ಒಳಗೊಂಡಂತೆ ಭದ್ರತೆಗಳು, ಜಪ್ತಿ ಮಾಡಿದ ಚರ ಸ್ವತ್ತು, ಅಂತಹ ಸ್ವತ್ತಿನ ಸರಾಸರಿ ಮೌಲ್ಯ ಮತ್ತು ಸ್ಥಿರ ಸ್ವತ್ತಿನ ಸಂದರ್ಭದಲ್ಲಿ ಭೂಮಿಯ ವಿಸ್ತೀರ್ಣ, ಅಂಥ ಸ್ವತ್ತಿನ ಸರ್ವೆ ನಂಬರುಗಳು ಮತ್ತು ಚೆಕ್ಕುಬಂದಿಗಳು ಹಾಗೂ ಅಂಥ ಸ್ವತ್ತಿನ ಹಕ್ಕು ಹೊಂದಿರುವವನ ಹೆಸರು;

(x) ಉಪಸಂಹಾರ; ಮತ್ತು

(xi) ಸಾಕ್ಷ್ಯಗಳು (ಸಾಕ್ಷ್ಯಗಳು ಅಥವಾ ಪುರಾವೆಯನ್ನು ಲಗತ್ತಿಸುವುದು).

(3) ಸಕ್ಷಮ ಪ್ರಾಧಿಕಾರದ ವ್ಯವಹರಣೆಗಳನ್ನು 7ನೇ ಪ್ರಕರಣದ (4)ನೇ ಉಪ ಪ್ರಕರಣದ ಅಡಿಯಲ್ಲಿ ದಾಖಲಿಸತಕ್ಕದ್ದು ಮತ್ತು ಕಾರ್ಯತತ್ಪರತೆಯಿಂದ ಕಾನೂನಿನ ಉಪಕ್ರಮವನ್ನು ಅನುಸರಿಸತಕ್ಕದ್ದು.

**5.ತಲೆಮರೆಸಿಕೊಂಡ ವ್ಯಕ್ತಿಗಳಿಗೆ ಸಂಬಂಧಿಸಿದ ಅಧಿಕಾರಗಳು.-** ಸಕ್ಷಮ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ನೆರವು ನೀಡಲು ನೇಮಕಗೊಂಡ ಅಧಿಕಾರಿಗಳು ಅಧಿನಿಯಮದ ಅಡಿಯಲ್ಲಿ ಯಾರ ಸಂಬಂಧದಲ್ಲಿ ಕ್ರಮಕೈಗೊಳ್ಳಲು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಯು ತಲೆಮರೆಸಿಕೊಂಡಿರುವನು ಅಥವಾ ಅವನಷ್ಟಕ್ಕೆ ಅವನೆ ಬಚ್ಚಿಟ್ಟುಕೊಂಡಿರುವನು ಎಂದು ಮನದಟ್ಟಾದರೆ ಮತ್ತು ನಂಬಲರ್ಹವಾದ ಕಾರಣಗಳನ್ನು ಹೊಂದಿದ್ದರೆ, ಸಕ್ಷಮ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ನೆರವು ನೀಡಲು ನೇಮಕಗೊಂಡ ಅಧಿಕಾರಿಗಳು ಮುಂದಿನ ಕ್ರಮಕ್ಕಾಗಿ ಗೊತ್ತುಪಡಿಸಲಾದ ನ್ಯಾಯಾಲಯಕ್ಕೆ ಲಿಖಿತದಲ್ಲಿ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

**6.ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ.-** ಹೊಣೆಯಾದ ಯಾವುದೇ ಸ್ವತ್ತನ್ನು ಅಧಿನಿಯಮದ ಉದ್ದೇಶವನ್ನು ವಿಫಲಗೊಳಿಸುವ ಉದ್ದೇಶದಿಂದ ಅಧಿನಿಯಮದ ಅಡಿಯಲ್ಲಿ ಜಪ್ತಿ ಮಾಡುವುದಕ್ಕೆ ಬಚ್ಚಿಡುವ, ವರ್ಗಾಯಿಸುವ ಅಥವಾ ಯಾವುದೇ ರೀತಿಯಲ್ಲಿ ವ್ಯವಹರಿಸುವ ಸಂಭವವಿದೆ ಎಂದು ಸಕ್ಷಮ ಪ್ರಾಧಿಕಾರಕ್ಕೆ ನೆರವು ನೀಡಲು ನೇಮಿಸಿದ ಅಧಿಕಾರಿಗಳು ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಮನದಟ್ಟಾದರೆ ಅಥವಾ ಹಾಗೆ ನಂಬಲರ್ಹ

ಕಾರಣವಿದ್ದರೆ, ಅದು ಅಂಥ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳಲು ಪೋಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಅಥವಾ ಅಂಥ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಕಾರ್ಯಸಾಧುವಲ್ಲವಾದರೆ ಅಂಥ ಸ್ವತ್ತನ್ನು ಸ್ಥಗಿತಗೊಳಿಸುವುದಕ್ಕಾಗಿ (Freeze) ಆದೇಶವನ್ನು ಹೊರಡಿಸಬಹುದು ಹಾಗೂ ಅದನ್ನು ವರ್ಗಾಯಿಸತಕ್ಕದ್ದಲ್ಲ ಅಥವಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದಲ್ಲ ಅಥವಾ ಅದರೊಂದಿಗೆ ವ್ಯವಹರಿಸತಕ್ಕದ್ದಲ್ಲ.

**7.ನ್ಯಾಯವಾದಿ (Legal practioner) ಮತ್ತು ಇತರರನ್ನು ನೇಮಿಸಿಕೊಳ್ಳುವ ಅಧಿಕಾರ.-** ಸಕ್ಷಮ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ನೆರವು ನೀಡಲು ನೇಮಿಸಿದ ಅಧಿಕಾರಿಯು, ಅಭಿಯೋಜನಾ ಇಲಾಖೆ, ನ್ಯಾಯವಾದಿಗಳ ಅಥವಾ ಸನ್ನದು ಲೆಕ್ಕಿಗರ ಅಥವಾ ಆಸ್ತಿಗಳ ಸ್ವಾಧೀನ ಮತ್ತು ವಸೂಲಾತಿಗಾಗಿ ಯಾರ ಸೇವೆ ಅಗತ್ಯವಾಗಿರುವುದೋ ಅಂಥ ಯಾರೇ ಇತರ ವ್ಯಕ್ತಿಗಳ ಸೇವೆಗಳನ್ನು ಬಳಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.

**8.ಆಸ್ತಿಗಳ ನ್ಯಾಯಸಂಬಂಧಿ (Forensic) ಅಥವಾ ಡಿಜಿಟಲ್ ಲೆಕ್ಕ ಪರಿಶೋಧನೆ, ಮೌಲ್ಯ ನಿರ್ಧರಣೆ ಅಥವಾ ಮಾರಾಟಕ್ಕಾಗಿ ಏಜನ್ಸಿಗಳನ್ನು ಪಟ್ಟಿ ಮಾಡಲು ಸರ್ಕಾರದ ಅಧಿಕಾರ.-** (1) ಸರ್ಕಾರವು,-

(ಎ) ಆಸ್ತಿಗಳ ಮೌಲ್ಯ ನಿರ್ಧರಣೆಗಾಗಿ ಮತ್ತು ಭವಿಷ್ಯವರ್ತಿ ಖರೀದಿದಾರರಿಗೆ ಆಸ್ತಿಗಳನ್ನು ಮಾರಾಟ ಮಾಡುವಲ್ಲಿ ಸಹಕರಿಸುವುದಕ್ಕಾಗಿ ಏಜೆನ್ಸಿಗಳು; ಮತ್ತು

(ಬಿ) ಹಣ ಹರಿವಿನ (Money trail) ಲೆಕ್ಕ ಪರಿಶೋಧನೆಗಾಗಿ ನ್ಯಾಯ ಸಂಬಂಧಿ ಲೆಕ್ಕ ಪರಿಶೋಧಕರು ಮತ್ತು ಡಿಜಿಟಲ್ ಲೆಕ್ಕ ಪರಿಶೋಧಕರ,

- ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು ಆಸ್ತಿಗಳ ಮೌಲ್ಯ ನಿರ್ಧರಣೆಗಾಗಿ, ಆಸ್ತಿಗಳ ಮಾರಾಟಕ್ಕಾಗಿ ಹಾಗೂ ಹಣ ಹರಿವಿನ ನ್ಯಾಯ ಸಂಬಂಧಿ ಮತ್ತು ಡಿಜಿಟಲ್ ಲೆಕ್ಕ ಪರಿಶೋಧನೆಗಾಗಿ ಅಂಥ ಏಜೆನ್ಸಿಗಳು ಮತ್ತು ಲೆಕ್ಕ ಪರಿಶೋಧಕರ ಸೇವೆಗಳನ್ನು ಬಳಸಿಕೊಳ್ಳತಕ್ಕದ್ದು.

(3) ಸಕ್ಷಮ ಪ್ರಾಧಿಕಾರವು, ರಾಜ್ಯ ಸರ್ಕಾರವು ಅಂಥ ಏಜೆನ್ಸಿಗಳ ಪಟ್ಟಿ ಮಾಡುವವರೆಗೆ, ಅಗತ್ಯವಾದಾಗಲೆಲ್ಲ ಭಾರತೀಯ ಬ್ಯಾಂಕುಗಳ ಸಂಘವು ಹಣ ಹರಿವಿನ ಲೆಕ್ಕ ಪರಿಶೋಧನೆಗಾಗಿ ಪಟ್ಟಿ ಮಾಡಿದ ನ್ಯಾಯ ಸಂಬಂಧಿ ಲೆಕ್ಕ ಪರಿಶೋಧಕರ ಅಥವಾ ಡಿಜಿಟಲ್ ಲೆಕ್ಕ ಪರಿಶೋಧಕರ ಸೇವೆಗಳನ್ನು ಸಹ ಬಳಸಿಕೊಳ್ಳತಕ್ಕದ್ದು.

**9.ಜಪ್ತಿ ಮಾಡಿದ ಸ್ವತ್ತುಗಳನ್ನು ಬಿಡುಗಡೆಗೊಳಿಸುವಾಗ ಪಡೆದುಕೊಳ್ಳಬೇಕಾದ ಮೌಲ್ಯ ನಿರ್ಧರಣೆಯ ವರದಿಗಳು:-** 17ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಿದ ಸ್ವತ್ತಿನ ಬದಲಿಗೆ ನ್ಯಾಯ ಸಮ್ಮತ ಮೌಲ್ಯವನ್ನು ಠೇವಣಿ ಇಡಲು ಅನುಮತಿಯನ್ನು ನೀಡುವಾಗ ಗೊತ್ತುಪಡಿಸಲಾದ ನ್ಯಾಯಾಲಯವು ಪಟ್ಟಿಮಾಡಿದ ಕನಿಷ್ಠ ಇಬ್ಬರು ಮೌಲ್ಯ ನಿರ್ಧರಣೆದಾರರಿಂದ ಮೌಲ್ಯ ನಿರ್ಧರಣೆ ವರದಿಗಳನ್ನು, ಸ್ವತ್ತುಗಳನ್ನು ಬಿಡುಗಡೆಗೊಳಿಸುವಾಗ ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ಮಂಜು ಪ್ರಸನ್ನನ್ ಪಿಳ್ಳೈ)
ಸರ್ಕಾರದ ಕಾರ್ಯದರ್ಶಿ
(ವಿತ್ತೀಯ ಸುಧಾರಣೆ)
ಆರ್ಥಿಕ ಇಲಾಖೆ

ಲಗತ್ತುಗಳು:

1. ನಮೂನೆ-ಎ (ನಿಯಮ 4ನ್ನು ನೋಡಿ) ಕ್ರಮವನ್ನು ಪ್ರಾರಂಭಿಸುವುದಕ್ಕೆ ನೋಟಿಸು
2. ನಮೂನೆ-ಬಿ (ನಿಯಮ 4ನ್ನು ನೋಡಿ) ಹೆಚ್ಚುವರಿ ಮಾಹಿತಿಗಾಗಿ ನೋಟಿಸು
3. ನಮೂನೆ-ಸಿ (ನಿಯಮ 4ನ್ನು ನೋಡಿ) ಅಂತಿಮ ನೋಟೀಸು

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) / (ಇ & ಆರ್ಎಸ್ಎ) / (ಎ & ಇ), ಕರ್ನಾಟಕ ಸರ್ಕಾರ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್, ನೃಪತುಂಗ ರಸ್ತೆ, ಬೆಂಗಳೂರು.
8. ಡೈರೆಕ್ಟರ್ ಜನರಲ್ ಆಫ್ ಪೋಲಿಸ್, ಸಿಐಡಿ, ಕಾರ್ಲ್‌ಟನ್ ಹೌಸ್, ಪ್ಯಾಲೆಸ್ ರಸ್ತೆ, ಬೆಂಗಳೂರು.
9. ನಿರ್ದೇಶಕರು, ವ್ಯಾಜ್ಯಗಳ ಇಲಾಖೆ, 6ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು - ಕಂದಾಯ ಇಲಾಖೆ (ಕಂದಾಯ ಇಲಾಖೆಯ ಮುಖಾಂತರ).
11. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ಕಂದಾಯ ಇಲಾಖೆಯ ಮುಖಾಂತರ).
12. ಎಲ್ಲಾ ಜಿಲ್ಲೆಗಳ ಪೋಲಿಸ್ ಆಯುಕ್ತರು / ಎಲ್ಲಾ ಜಿಲ್ಲೆಗಳ ಪೋಲಿಸ್ ಅಧೀಕ್ಷಕರು (ಒಳಾಡಳಿತ ಇಲಾಖೆಯ ಮುಖಾಂತರ).
13. ಎಲ್ಲಾ ಕಂದಾಯ ಉಪ ವಿಭಾಗಗಳ ಸಹಾಯಕ ಆಯುಕ್ತರು (ಕಂದಾಯ ಇಲಾಖೆಯ ಮುಖಾಂತರ).
14. ಸಂಚಾಲಕರು, ರಾಜ್ಯ ಮಟ್ಟದ ಸಮನ್ವಯ ಸಮಿತಿ & ಪ್ರಾದೇಶಿಕ ನಿರ್ದೇಶಕರು, ಭಾರತೀಯ ರಿಸರ್ವ್ ಬ್ಯಾಂಕ್, ನೃಪತುಂಗ ರಸ್ತೆ, ಬೆಂಗಳೂರು.
15. ನೋಡಲ್ ಕೋಶ - ಕೆಪಿಐಡಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ.
6. ಕಛೇರಿ ಪ್ರತಿ.

**ನಮೂನೆ-ಎ**

**(ನಿಯಮ 4ನ್ನು ನೋಡಿ)**

**ಕ್ರಮವನ್ನು ಪ್ರಾರಂಭಿಸುವುದಕ್ಕೆ ನೋಟಿಸು**

ಇವರಿಗೆ,

____________________

____________________

____________________

ಮಾನ್ಯರೆ,

ವಿಷಯ: ಮೆ|| -

ಸ್ವೀಕರಿಸಲಾದ ಮಾಹಿತಿ ಅಥವಾ ವರದಿಗಳ ಆಧಾರದ ಮೇಲೆ ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಸಂಜ್ಞೇಯವಾದ ಕೃತ್ಯದಲ್ಲಿ ವಿಷಯದ ಹಣಕಾಸು ಸಂಸ್ಥೆ ಅಥವಾ ಠೇವಣಿ ಪಡೆದವನು ತೊಡಗಿದ್ದಾನೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ.

3ನೇ ಅಥವಾ 4ನೇ ಪ್ರಕರಣದ ಉಲ್ಲಂಘನೆಯಲ್ಲಿ ಅನಧಿಕೃತ ಠೇವಣಿ ಯೋಜನೆಗಳು ಅಥವಾ ಠೇವಣಿ ಯೋಜನೆಗಳ ಅಡಿಯಲ್ಲಿನ ಸುಸ್ತಿಗಳ ಸಂಬಂಧದಲ್ಲಿ ತನಿಖೆ ಅಥವಾ ವಿಚಾರಣೆಯನ್ನು ನಡೆಸುವಾಗ ಸಕ್ಷಮ ಪ್ರಾಧಿಕಾರಿ ಅಥವಾ ಅಧಿನಿಯಮದ 7ನೇ ಪ್ರಕರಣದ (3) ಮತ್ತು (4) ನೇ ಉಪಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಗೆ ನೆರವು ನೀಡಲು ನೇಮಿಸಲಾದ ಅಧಿಕಾರಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು. ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಮುಂದಿನಂತೆ ಆದೇಶಿಸಲಾಗಿದೆ:

ವಿಷಯಕ್ಕೆ ಸಂಬಂಧಿಸಿದಂತೆ, ಈ ಮುಂದಿನದನ್ನು ಸಲ್ಲಿಸುವಂತೆ ತಮ್ಮನ್ನು ಅಗತ್ಯಪಡಿಸಲಾಗಿದೆ;

(ಎ) ಹಣಕಾಸು ಸಂಸ್ಥೆಯ ವಿವರಗಳು, ಸಂಸ್ಥೆಯ ನೋಂದಣಿ, ವಿಶಿಷ್ಟ ಗುರುತಿನ ಸಂಖ್ಯೆ ಅಥವಾ ನೋಂದಣಿ ಮತ್ತು PAN ಸಂಖ್ಯೆಗಳನ್ನು ಒಳಗೊಂಡಂತೆ ನಿಯಂತ್ರಕರಿಂದ ಠೇವಣಿಗಳನ್ನು ಸ್ವೀಕರಿಸಲು ಅನುಮತಿಗಳು ಯಾವುದಾದರೂ ಇದ್ದಲ್ಲಿ ಅದು,

(ಬಿ) "ಎ" ವಿಶಿಷ್ಟ ಗುರುತಿನ ಸಂಖ್ಯೆ ಅಥವಾ ನೋಂದಣಿ ಮತ್ತು PAN ಸಂಖ್ಯೆಗಳನ್ನು ಒಳಗೊಂಡಂತೆ ಪ್ರವರ್ತಕರು, ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು, ಪಾಲುದಾರರು, ವ್ಯವಸ್ಥಾಪನಾ ವ್ಯಕ್ತಿಗಳು ಇತ್ಯಾದಿಗಳ ವಿವರಗಳು.

(ಸಿ) ಇತ್ತೀಚಿಗೆ ದಾಖಲು ಮಾಡಿದ ಲೆಕ್ಕ ಪರಿಶೋಧಿಸಲ್ಪಟ್ಟ ಆರ್ಥಿಕ ವಿವರಪಟ್ಟಿ ಹಾಗೂ ದಾಖಲಿಸಿದ ಲಾಭ ಮತ್ತು ನಷ್ಟದ ಲೆಕ್ಕ ಪತ್ರಗಳು.

(ಡಿ) ನಿಯಂತ್ರಕರ ವಿವರಗಳು ಮತ್ತು ನೋಂದಣಿ ಪ್ರಮಾಣ ಪತ್ರಗಳ ಪ್ರತಿ, ಠೇವಣಿ ಪಡೆಯುವ ಚಟುವಟಿಕೆಯನ್ನು ಕೈಗೊಳ್ಳಲು ಅನುಮತಿಗಳು.

(ಇ) ಸಾರ್ವಜನಿಕರಿಂದ ಯಾವ ಠೇವಣಿಗಳ ಯೋಜನೆಯ ಅಡಿಯಲ್ಲಿ ಠೇವಣಿಗಳನ್ನು ಸಂಗ್ರಹಿಸಲಾಗುತ್ತಿದೆಯೋ ಆ ಯೋಜನೆಯ ಪೂರ್ಣ ವಿವರಗಳನ್ನು ಒದಗಿಸುವುದು.

(ಎಫ್) ಠೇವಣಿದಾರರ ಪಟ್ಟಿ ಜೊತೆಗೆ ಸ್ವೀಕರಿಸಲಾದ ಠೇವಣಿ, ಬಡ್ಡಿದರ, ಅವಧಿ ಮುಕ್ತಾಯದ ದಿನಾಂಕ, ಬಡ್ಡಿ ಮತ್ತು ಅಸಲಿನ ಮರುಪಾವತಿಯ ನಿಬಂಧನೆಗಳು, ಯಾವುದೇ ಇತರ ವಾಗ್ದಾನಗಳು ಅಥವಾ ಭರವಸೆಗಳು ಅಥವಾ ಪಾವತಿಸಬೇಕಾದ ಕಮೀಷನ್‌ಗಳು ಇತ್ಯಾದಿ.

(ಜಿ) ಠೇವಣಿಯ ಮರುಪಾವತಿಯಲ್ಲಿ ಅಥವಾ ಅಂಥ ಠೇವಣಿಯ ಪ್ರತಿಯಾಗಿ ಭರವಸೆ ನೀಡಿದ ಯಾವುದೇ ನಿರ್ದಿಷ್ಟ ಸೇವೆಯಲ್ಲಿ ತಪ್ಪಿದ್ದು, ಯಾವುದಾದರೂ ಇದ್ದಲ್ಲಿ ದಿನಾಂಕದೊಂದಿಗೆ ಅದರ ವಿವರಗಳು.

(ಎಚ್) ಸುಸ್ತಿಯಾಗಿರುವ ಒಟ್ಟು ಮೊತ್ತ ಮತ್ತು ಬಾಧಿತರಾದ ಠೇವಣಿದಾರರು ಯಾರಾದರೂ ಇದ್ದಲ್ಲಿ ಅವರ ಸಂಖ್ಯೆ.

(ಐ) ಸುಸ್ತಿಯಾಗಿರುವುದಕ್ಕೆ ಕಾರಣಗಳು ಯಾವುದಾದರೂ ಇದ್ದಲ್ಲಿ.

(ಜೆ) ಸುಸ್ತಿ ಮೊತ್ತವನ್ನು ಮರುಪಾವತಿಸಲು ತೆಗೆದುಕೊಂಡ ಅಥವಾ ಉದ್ದೇಶಿಸಿದ ಕ್ರಮಗಳು.

(ಕೆ) ಲೆಕ್ಕಪತ್ರಗಳಲ್ಲಿನ ಇತ್ತೀಚಿನ ಉಳಿಕೆಯೊಂದಿಗೆ ಹಣಕಾಸು ಸಂಸ್ಥೆಯ ಬ್ಯಾಂಕ್ ಲೆಕ್ಕಪತ್ರಗಳ ವಿವರಗಳು.

ಮೇಲೆ ಪಟ್ಟಿ ಮಾಡಿದ ಪೂರ್ಣ ವಿವರಗಳನ್ನು ಯುಕ್ತವಾಗಿ ದೃಢೀಕರಿಸಿ ನನ್ನ ಕಛೇರಿಗೆ ____________________ ದಂದು ________________ ಇಲ್ಲಿ ತಾವೇ ಖುದ್ದಾಗಿ ಅಥವಾ ಈ ಬಗ್ಗೆ ಲಿಖಿತದಲ್ಲಿ ಯುಕ್ತವಾಗಿ ಪ್ರಾಧಿಕೃತಗೊಳಿಸಿದ ಪ್ರತಿನಿಧಿಯ ಮೂಲಕವಾಗಿ ಸಲ್ಲಿಸಲು ಅಥವಾ ವಿಷಯದಲ್ಲಿ ಚಟುವಟಿಕೆ ಅಥವಾ ಕೃತ್ಯಗಳ ಬೆಂಬಲವಾಗಿ ತಾವು ಭರವಸೆ ಇಡಬಹುದಾದ ಯಾವುದೇ ದಸ್ತಾವೇಜುಗಳು, ಲೆಕ್ಕ ಪತ್ರಗಳು ಮತ್ತು ಯಾವುದೇ ಇತರ ಸಾಕ್ಷ್ಯವನ್ನು ಸದರಿ ಸಮಯದಲ್ಲಿ ಒದಗಿಸಲು ಅಥವಾ ಒದಗಿಸುವಂತೆ ಮಾಡಲು ತಮ್ಮನ್ನು ಈ ಮೂಲಕ ಅಗತ್ಯಪಡಿಸಲಾಗಿದೆ.

ಈ ಕೆಳಗೆ ಸಹಿ ಮಾಡಿದವರ ಆದೇಶಗಳನ್ನು ಪಾಲಿಸಲು ತಾವು ತಪ್ಪಿದಲ್ಲಿ, ನಿಮಗೆ ವಿಷಯದಲ್ಲಿ ಏನನ್ನೂ ಹೇಳುವುದಕ್ಕೆ ಇಲ್ಲವೆಂದು ಭಾವಿಸಲಾಗುತ್ತದೆ ಮತ್ತು ಅಧಿನಿಯಮದ ಯುಕ್ತ ಉಪಬಂಧಗಳ ಅಡಿಯಲ್ಲಿ ಕ್ರಮವನ್ನು ಪ್ರಾರಂಭಿಸಲಾಗುತ್ತದೆ. ಅಹವಾಲನ್ನು ಹೇಳಿಕೊಳ್ಳಲು ಕರೆದಾಗ ಹಾಜರಾಗಲು ತಪ್ಪುವುದು ಅಥವಾ ಸಾಕ್ಷ್ಯವನ್ನು ಹಾಜರುಪಡಿಸಲು ತಪ್ಪುವುದು ಶ್ರೇಷ್ಠ ತೀರ್ಪು ಮೌಲ್ಯಮಾಪನ (Best Judgement Assement) ಅಥವಾ ಏಕಪಕ್ಷೀಯ ಆದೇಶಕ್ಕೆ ಕಾರಣವಾಗಬಹುದು.

(ಸೂಚನೆ- * ಯಾವುದು ಅನ್ವಯಿಸುವುದಿಲ್ಲವೋ ಅದನ್ನು ಹೊಡೆದುಹಾಕಿ)

ತಮ್ಮ ವಿಶ್ವಾಸಿ,

ದಿನಾಂಕ:

**ನಮೂನೆ-ಬಿ**

**(ನಿಯಮ 4ನ್ನು ನೋಡಿ)**

**ಹೆಚ್ಚುವರಿ ಮಾಹಿತಿಗಾಗಿ ನೋಟಿಸು**

ಇವರಿಗೆ,

___________________

___________________

___________________

ಮಾನ್ಯರೆ,

ವಿಷಯ: ಮೆ॥ -

ಉಲ್ಲೇಖ: ನಮೂನೆ-ಎ ನಲ್ಲಿನ ನೋಟೀಸು ದಿನಾಂಕ: ___________

ಸ್ವೀಕರಿಸಲಾದ ಮಾಹಿತಿ ಅಥವಾ ವರದಿಗಳ ಆಧಾರದ ಮೇಲೆ ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಸಂಜ್ಞೇಯವಾದ ಕೃತ್ಯದಲ್ಲಿ ವಿಷಯದ ಹಣಕಾಸು ಸಂಸ್ಥೆ ಅಥವಾ ಠೇವಣಿ ಪಡೆದವನು ತೊಡಗಿದ್ದಾನೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ.

3ನೇ ಅಥವಾ 4ನೇ ಪ್ರಕರಣದ ಉಲ್ಲಂಘನೆಯಲ್ಲಿ ಅನಧಿಕೃತ ಠೇವಣಿ ಯೋಜನೆಗಳು ಅಥವಾ ಠೇವಣಿ ಯೋಜನೆಗಳ ಅಡಿಯಲ್ಲಿನ ಸುಸ್ತಿಗಳ ಸಂಬಂಧದಲ್ಲಿ ತನಿಖೆ ಅಥವಾ ವಿಚಾರಣೆಯನ್ನು ನಡೆಸುವಾಗ ಸಕ್ಷಮ ಪ್ರಾಧಿಕಾರಿ ಅಥವಾ ಅಧಿನಿಯಮದ 7ನೇ ಪ್ರಕರಣದ (3) ಮತ್ತು (4) ನೇ ಉಪಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಗೆ ನೆರವು ನೀಡಲು ನೇಮಿಸಲಾದ ಅಧಿಕಾರಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು. ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಮುಂದಿನಂತೆ ಆದೇಶಿಸಲಾಗಿದೆ:

(ಎ) ಠೇವಣಿ ಯೋಜನೆ ಅಥವಾ ಚಿಟ್‌ಫಂಡ್‌ಗಳ ಯೋಜನೆ ಅಥವಾ ಠೇವಣಿ ಮರು ಪಾವತಿಯಲ್ಲಿ ಅಥವಾ ಅಂಥ ಠೇವಣಿಗೆ ಪ್ರತಿಯಾಗಿ ವಾಗ್ದಾನ ಮಾಡಿದ ಯಾವುದೇ ನಿರ್ದಿಷ್ಟ ಸೇವೆಯಲ್ಲಿ ತಪ್ಪಿದ ಠೇವಣಿಗಳ ಕುರಿತು ಈ ಕೆಳಗೆ ಪಟ್ಟಿಮಾಡಲಾದ ಕೆಲವು ಹೆಚ್ಚುವರಿ ವಿವರಗಳು ಅಥವಾ ಸ್ಪಷ್ಟೀಕರಣಗಳು ಅಥವಾ ಹೆಚ್ಚುವರಿ ಮಾಹಿತಿಯ ಅಗತ್ಯವಿದ್ದು, ನನಗೆ ಹಣಕಾಸು ಸಂಸ್ಥೆಯು ಠೇವಣಿ ಯೋಜನೆ/ಗಳ ಅಡಿಯಲ್ಲಿ ಕೂಡಲೇ ಹೆಚ್ಚುವರಿ ಮಾಹಿತಿಯನ್ನು ಒದಗಿಸಬೇಕಾಗಿ ಕೋರುತ್ತೇನೆ.

i.
ii.
iii.
iv.

(ಬಿ) ತಾವು ನನ್ನ ಕಛೇರಿಗೆ ____________________ ದಂದು ________________ ಇಲ್ಲಿ ತಾವೇ ಖುದ್ದಾಗಿ ಅಥವಾ ಈ ಬಗ್ಗೆ ಲಿಖಿತದಲ್ಲಿ ಯುಕ್ತವಾಗಿ ಪ್ರಾಧಿಕೃತಗೊಳಿಸಿದ ಪ್ರತಿನಿಧಿಯ ಮೂಲಕವಾಗಿ ಸಲ್ಲಿಸಲು ಅಥವಾ ವಿಷಯದಲ್ಲಿ ಚಟುವಟಿಕೆ ಅಥವಾ ಕೃತ್ಯಗಳ ಬೆಂಬಲವಾಗಿ ತಾವು ಭರವಸೆ ಇಡಬಹುದಾದ ಯಾವುದೇ

ದಸ್ತಾವೇಜುಗಳು, ಲೆಕ್ಕ ಪತ್ರಗಳು ಮತ್ತು ಯಾವುದೇ ಇತರ ಸಾಕ್ಷ್ಯವನ್ನು ಸದರಿ ಸಮಯದಲ್ಲಿ ಒದಗಿಸಲು ಅಥವಾ ಒದಗಿಸುವಂತೆ ಮಾಡಲು ತಮ್ಮನ್ನು ಈ ಮೂಲಕ ಅಗತ್ಯಪಡಿಸಲಾಗಿದೆ.

(ಸಿ) ಈ ಕೆಳಗೆ ಸಹಿ ಮಾಡಿದವರ ಆದೇಶಗಳನ್ನು ಪಾಲಿಸಲು ತಾವು ತಪ್ಪಿದಲ್ಲಿ, ನಿಮಗೆ ವಿಷಯದಲ್ಲಿ ಏನನ್ನೂ ಹೇಳುವುದಕ್ಕೆ ಇಲ್ಲವೆಂದು ಭಾವಿಸಲಾಗುತ್ತದೆ ಮತ್ತು ಅಧಿನಿಯಮದ ಯುಕ್ತ ಉಪಬಂಧಗಳ ಅಡಿಯಲ್ಲಿ ಕ್ರಮವನ್ನು ಪ್ರಾರಂಭಿಸಲಾಗುತ್ತದೆ. ಅಹವಾಲನ್ನು ಹೇಳಿಕೊಳ್ಳಲು ಕರೆದಾಗ ಹಾಜರಾಗಲು ತಪ್ಪುವುದು ಅಥವಾ ಸಾಕ್ಷ್ಯವನ್ನು ಹಾಜರುಪಡಿಸಲು ತಪ್ಪುವುದು ಶ್ರೇಷ್ಠ ತೀರ್ಪು ಮೌಲ್ಯಮಾಪನ (Best Judgement Assement) ಅಥವಾ ಏಕಪಕ್ಷೀಯ ಆದೇಶಕ್ಕೆ ಕಾರಣವಾಗಬಹುದು.

(ಸೂಚನೆ- * ಯಾವುದು ಅನ್ವಯಿಸುವುದಿಲ್ಲವೋ ಅದನ್ನು ಹೊಡೆದುಹಾಕಿ)

ತಮ್ಮ ವಿಶ್ವಾಸಿ,

ದಿನಾಂಕ:

**ನಮೂನೆ-ಸಿ**

**(ನಿಯಮ 4ನ್ನು ನೋಡಿ)**

**ಅಂತಿಮ ನೋಟೀಸು**

ಇವರಿಗೆ,

____________________

____________________

____________________

ಮಾನ್ಯರೆ,

ವಿಷಯ: ಮೆ॥ -

ಉಲ್ಲೇಖ: ನಮೂನೆ-ಎ ನಲ್ಲಿನ ನೋಟೀಸು ದಿನಾಂಕ: ____________

ನಮೂನೆ-ಬಿ ನಲ್ಲಿನ ನೋಟೀಸು ದಿನಾಂಕ: ____________

ಸ್ವೀಕರಿಸಲಾದ ಮಾಹಿತಿ ಅಥವಾ ವರದಿಗಳ ಆಧಾರದ ಮೇಲೆ ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಸಂಜ್ಞೇಯವಾದ ಕೃತ್ಯದಲ್ಲಿ ವಿಷಯದ ಹಣಕಾಸು ಸಂಸ್ಥೆ ಅಥವಾ ಠೇವಣಿ ಪಡೆದವನು ತೊಡಗಿದ್ದಾನೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ.

3ನೇ ಅಥವಾ 4ನೇ ಪ್ರಕರಣದ ಉಲ್ಲಂಘನೆಯಲ್ಲಿ ಅನಧಿಕೃತ ಠೇವಣಿ ಯೋಜನೆಗಳು ಅಥವಾ ಠೇವಣಿ ಯೋಜನೆಗಳ ಅಡಿಯಲ್ಲಿನ ಸುಸ್ತಿಗಳ ಸಂಬಂಧದಲ್ಲಿ ತನಿಖೆ ಅಥವಾ ವಿಚಾರಣೆಯನ್ನು ನಡೆಸುವಾಗ ಸಕ್ಷಮ ಪ್ರಾಧಿಕಾರಿ ಅಥವಾ ಅಧಿನಿಯಮದ 7ನೇ ಪ್ರಕರಣದ (3) ಮತ್ತು (4) ನೇ ಉಪಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಗೆ ನೆರವು ನೀಡಲು ನೇಮಿಸಲಾದ ಅಧಿಕಾರಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು. ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಮುಂದಿನಂತೆ ಆದೇಶಿಸಲಾಗಿದೆ:

(ಎ) ವಿವರಗಳು ಮತ್ತು ದಸ್ತಾವೇಜುಗಳನ್ನು ಕೋರುವ ನಮೂನೆ ಎ ನಲ್ಲಿನ ಸಂ______ ದಿನಾಂಕ ____________ ನೋಟೀಸಿನ ಅನುಸಾರವಾಗಿ ವಿವರಗಳು ಮತ್ತು ದಸ್ತಾವೇಜುಗಳನ್ನು ಸಲ್ಲಿಸುವಂತೆ ನಿಮ್ಮನ್ನು ಕೋರಲಾಗಿತ್ತು. ಆದರೆ ಕೋರಿದ ವಿವರಗಳು ಮತ್ತು ದಸ್ತಾವೇಜನ್ನು ಸಲ್ಲಿಸಲು ನೀವು ವಿಫಲರಾಗಿರುತ್ತೀರಿ.

ಮತ್ತು/ಅಥವಾ

(ಬಿ) ನಮೂನೆ ಬಿ ನಲ್ಲಿನ ನೋಟೀಸಿನ ಅನುಸಾರವಾಗಿ ಕೆಲವು ಹೆಚ್ಚಿನ ದಸ್ತಾವೇಜುಗಳು ಮತ್ತು ವಿವರಗಳನ್ನು ಒದಗಿಸುವಂತೆ ನಿಮ್ಮನ್ನು ಕೋರಲಾಗಿತ್ತು ಹಾಗೂ ನನ್ನ ಕಛೇರಿಗೆ ____________________ ದಂದು ________________ ಇಲ್ಲಿ ತಾವೇ ಖುದ್ದಾಗಿ ಅಥವಾ ಈ ಬಗ್ಗೆ ಲಿಖಿತದಲ್ಲಿ ಯುಕ್ತವಾಗಿ ಪ್ರಾಧೀಕರಿಸಿದ ಪ್ರತಿನಿಧಿಯ ಮೂಲಕವಾಗಿ ಸಲ್ಲಿಸಲು ಅಥವಾ ವಿಷಯದಲ್ಲಿ ಚಟುವಟಿಕೆ ಅಥವಾ ಕೃತ್ಯಗಳ ಬೆಂಬಲವಾಗಿ ಯಾವುದೇ ದಸ್ತಾವೇಜುಗಳು, ಲೆಕ್ಕ ಪತ್ರಗಳು ಮತ್ತು ತಾವು ಭರವಸೆ ಇಡಬಹುದಾದ ಯಾವುದೇ ಇತರ ಸಾಕ್ಷ್ಯವನ್ನು ಸದರಿ ಸಮಯದಲ್ಲಿ ಒದಗಿಸಲು ಅಥವಾ ಒದಗಿಸುವಂತೆ ಮಾಡಲು ತಮ್ಮನ್ನು ಕೋರಲಾಗಿತ್ತು.

ಆದರೆ ನೀವು ಕೋರಿರುವ ವಿವರಗಳು ಮತ್ತು ದಸ್ತಾವೇಜುಗಳೊಂದಿಗೆ ನನ್ನ ಮುಂದೆ ಹಾಜರಾಗಲು ವಿಫಲರಾಗಿರುತ್ತೀರಿ.

(ಸಿ) ಈ ಕೆಳಗೆ ಸಹಿ ಮಾಡಿರುವ ಆದೇಶಗಳನ್ನು ನೀವು ಪಾಲಿಸದಿರುವ ಹಿನ್ನೆಲೆಯಲ್ಲಿ, ಕೋರಿರುವ ವಿವರಗಳು ಮತ್ತು ದಸ್ತಾವೇಜನ್ನು ಸಲ್ಲಿಸಲು ಮತ್ತು/ಅಥವಾ ಕೋರಿರುವ ವಿವರಗಳು /ದಸ್ತಾವೇಜಿನೊಂದಿಗೆ ನನ್ನ ಮುಂದೆ ____________________ ದಂದು ________________ ಇಲ್ಲಿ ಹಾಜರಾಗಲು ನಿಮಗೆ ಒಂದು ಕೊನೆಯ ಅವಕಾಶವನ್ನು ನೀಡಲಾಗುತ್ತಿದೆ, ವಿಫಲರಾದಲ್ಲಿ ಅದನ್ನು ಈ ವಿಷಯದಲ್ಲಿ ನೀವು ಹೇಳುವುದೇನನ್ನೂ ಇಲ್ಲವೆಂದು ಭಾವಿಸಲಾಗುವುದು ಹಾಗೂ ಅಧಿನಿಯಮದ ಯುಕ್ತ ಉಪಬಂಧಗಳ ಅಡಿಯಲ್ಲಿ ಕ್ರಮವನ್ನು ಕೈಗೊಳ್ಳಲಾಗುವುದು. ಕರೆದಾಗ ಹಾಜರಾಗಲು ತಪ್ಪುವುದು ಅಥವಾ ಸಾಕ್ಷ್ಯವನ್ನು ಹಾಜರುಪಡಿಸಲು ತಪ್ಪುವುದು ಶ್ರೇಷ್ಠ ತೀರ್ಪು ಮೌಲ್ಯಮಾಪನ (Best Judgement Assement) ಅಥವಾ ಏಕಪಕ್ಷೀಯ ಆದೇಶಕ್ಕೆ ಕಾರಣವಾಗಬಹುದು.

(ಸೂಚನೆ- * ಯಾವುದು ಅನ್ವಯಿಸುವುದಿಲ್ಲವೋ ಅದನ್ನು ಹೊಡೆದುಹಾಕಿ)

ತಮ್ಮ ವಿಶ್ವಾಸಿ,

ದಿನಾಂಕ:

ರಾಜ್ಯಪಾಲರ ಆದೇಶಾನುಸಾರ ಮತ್ತು……